ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಮಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ರೂಪಿಸಿದ ವಲಯ ನಿಯಮಾವಳಿಗಳ ಪ್ರಕಾರ ಬಹುಮಹಡಿ ವಾಸ್ತವ್ಯದ ಹಾಗೂ ವಾಣಿಜ್ಯ ಕಟ್ಟಡಗಳಿಗೆ ಪರವಾನಗಿ ನೀಡಲು ಅವಕಾಶ ಕಲ್ಪಿಸಲಾಗಿದೆ. ಈ ನಿಯಮಗಳ ಪ್ರಕಾರ ಬಹುಮಹಡಿ ಕಟ್ಟಡ ಅಂದರೆ ನೆಲಮಹಡಿ ಹಾಗೂ 1 ರಿಂದ 4ನೇ ಮಹಡಿ ಹಾಗೂ ಅದಕ್ಕಿಂತ ಎತ್ತರದ ಕಟ್ಟಡಗಳಿಗೆ ಕನಿಷ್ಟ 4.5 ಮೀ. ಅಂತರ್ ಜಾಗ ಇದ್ದಲ್ಲಿ ಅನುಮತಿ ನೀಡಬಹುದಾಗಿದೆ. ಈ ರೀತಿ ಅನುಮತಿ ನೀಡಿರುವ ಸಂದರ್ಭದಲ್ಲಿ ವಲಯ ನಿಯಮಾವಳಿಗಳ ಉಳಿತ ಇತರ ನಿಯಮಗಳನ್ನು (ಅಂದರೆ ಆಕ್ರಮಿಸಿದ ಜಾಗ, ವಿಸ್ತೀರ್ಣ, ಪ್ರಮಾಣ, ಕಟ್ಟಡದ ಎತ್ತರ, ಕಟ್ಟಡ ರೇಖೆ, ರಸ್ತೆ ಅಗಲಗೊಳಿಸುವ ಪ್ರಸ್ತಾವನೆ ಇತ್ಯಾದಿ) ಅನುಸರಿಸಲಾಗುತ್ತಿದೆ.

ಆ) ವಲಯ ನಿಯಮಾವಳಿಗಳಲ್ಲಿ ನ್ಯಾಷನಲ್ ಬಿಲ್ಡಿಂಗ್ ಕೋಡ್ ಪ್ರಕಾರ ಅಗ್ನಿಶಾಮಕ ನಿಯಮದಂತೆ ಸುರಕ್ಷತಾ ಕ್ರಮ ತೆಗೆದುಕೊಳ್ಳತಕ್ಕದ್ದು ಎಂಬ ನಿಯಮ ಇರುತ್ತದೆ.

ಇ) ಇಂತಹ ಪರಿಸ್ಥಿತಿಯು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ಇಲ್ಲ.

ಉ) ಇಲ್ಲ. ಬಹುಮಹಡಿಗಳ ಕಟ್ಟಡಗಳಲ್ಲಿ ಅಗ್ನಿ ಆಕಸ್ಮಿಕಗಳು ಆಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಮತ್ತು ಆಸ್ತಿ ಹಾನಿ, ಜೀವಹಾನಿ ಉಂಟಾಗುವುದನ್ನು ತಪ್ಪಿಸಲು ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯುವುದನ್ನು ಕಡ್ಡಾಯಪಡಿಸಲಾಗಿದೆ.

ಊ) ಉದ್ಭವಿಸುವುದಿಲ್ಲ.

4353 (5230) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) :- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2003-04 ಮತ್ತು 2004-05ನೇ ಸಾಲಿಗೆ ಅನ್ವಯವಾಗುವಂತೆ ಬೆಂಗಳೂರು ನಗರ ಪ್ರದೇಶದಲ್ಲಿ ನಡೆದ ಉದ್ಯಮಿಗಳ ಅಪಹರಣ ಪ್ರಕರಣಗಳು ಎಷ್ಟು; ಈ ಪ್ರಕರಣಗಳಲ್ಲಿನ ಆರೋಪಿಗಳನ್ನು ಬಂಧಿಸಿ ಸೂಕ್ತ ಕಾನೂನು ಕ್ರಮಗಳನ್ನು ಜರುಗಿಸಲಾಗಿದೆಯೇ;

ಆ) ಬೆಂಗಳೂರಿನಲ್ಲಿ 2005ರ ಫೆಬ್ರವರಿ ತಿಂಗಳಲ್ಲಿ ನಡೆದ ರಿಯಲ್ ಎಸ್ಟೇಟ್ ಉದ್ಯಮಿಗಳ ಅಪಹರಣದ ಆರೋಪಿಗಳನ್ನು ಬಂಧಿಸಲಾಗಿದೆಯೇ. ಹೌದಾದಲ್ಲಿ. ಆ ಕುರಿತಾದ ವಿವರಗಳೇನು;

ಇ) ಸದರಿ ಪ್ರಕರಣದ ಆರೋಪಿಗಳನ್ನು ಬಂಧಿಸುವಲ್ಲಿ ವಿಳಂಬವಾಗಲು ಕಾರಣಗಳೇನು;

ಈ) ಇಂತಹ, ಅಪಹರಣ ಪ್ರಕರಣಗಳನ್ನು ತಡೆಗಟ್ಟುವಿಕೆಗೆ ಸರಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) 2003–04ನೇ ಸಾಲಿನಲ್ಲಿ ಬೆಂಗಳೂರು ನಗರದ ಪ್ರದೇಶದಲ್ಲಿ ಯಾವುದೇ ಉದ್ಯಮಿಗಳ ಅಪಹರಣ ಪ್ರಕರಣ ವರದಿಯಾಗಿರುವುದಿಲ್ಲ. ಆದರೆ 2004–05ನೇ ಸಾಲಿನಲ್ಲಿ ಒಂದು ಪ್ರಕರಣವು ಸದಾಶಿವನಗರ ಪೊಲೀಸ್ ಠಾಣೆ ಮೊ.ಸಂ.10/05 ಕಲಂ: 364(1). 384,506ಬಿ ರೆ/ವಿ 34 ಐಪಿಸಿ ಹಾಗೂ 3 ಮತ್ತು 25 ಶಸ್ತ್ರ ಕಾಯಿದೆಯಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಈ ಪ್ರಕರಣದಲ್ಲಿ ಆರೋಪಿಗಳನ್ನು ಬಂಧಿಸಿ ಕಾನೂನು ರೀತ್ಯಾ ಸೂಕ್ತ ಕ್ರಮ ಜರುಗಿಸಲಾಗಿದೆ.

ಆ) ಬೆಂಗಳೂರಿನಲ್ಲಿ ಫೆಬ್ರವರಿ 2005ರಲ್ಲಿ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಒಂದು ಪ್ರಕರಣ ದಾಖಲಾಗಿರುತ್ತದೆ. ವಿವರ ಈ ಕೆಳಗಿನಂತಿದೆ. ದಿನಾಂಕ : 28.2.2005 ರಂದು ಮಧ್ಯಾಹ್ನ 3 ಗಂಟೆಗೆ ಆರೋಪಿ ಸುರೇಶ್ ರವರು ಪಿರ್ಯಾದಿ ಶ್ರೀ ಮಂಜುನಾಥನ ಪಾಲುದಾರರಾದ ಶ್ರೀ ರಾಮನಾಥ್ ರವರ ಮೊಬೈಲ್‌ಗೆ ಫೋನ್ ಮಾಡಿ ತಾವು ಪ್ರಾಜೆಕ್ಟ್ ಮಾಡುತ್ತಿರುವುದಾಗಿ ಲೋನ್ ಬಗ್ಗೆ ಮಾತನಾಡಬೇಕೆಂದು ಪಿರ್ಯಾದುದಾರರು. ಹೋಟೆಲ್ ಏಟ್ರಿಯಾ ಬಳಿ ಬರುವಂತೆ ಕರೆ ನೀಡಿದ್ದು ಅದರಂತೆ ಪಿರ್ಯಾದುದಾರರು ದಿನಾಂಕ : 28.2.2005 ರಂದು ಸಂಜೆ 5 ಗಂಟೆಗೆ ತನ್ನ ಇಬ್ಬರು ಪಾಲುದಾರರಾದ ಶ್ರೀ ರಾಮನಾಥ್ ಹಾಗೂ ಶ್ರೀ ಸೋಮಶೇಖರ್ ರವರ ಜೊತೆ ಹೋಟೆಲ್ ಏಟ್ರಿಯಾ ಬಳಿ ಹೋದಾಗ ಪಿರ್ಯಾದುದಾರರನ್ನು ಆರೋಪಿ ಭೇಟಿಯಾಗಿ ತಾನೇ ಸುರೇಶ್ ಎಂದು ಪರಿಚಯಿಸಿಕೊಂಡು ತಾನು 40 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಮಾಡುತ್ತಿದ್ದೇನೆ ನೀವು 20 ಕೋಟಿ ರೂಪಾಯಿಗಳನ್ನು ಬ್ಯಾಂಕಿನಿಂದ ಪ್ರಾಜೆಕ್ಟ್‌ಗೆ ಸಾಲ ಕೊಡಿಸಬೇಕೆಂದು ತಿಳಿಸಿ

ಪ್ರಾಜೆಕ್ಟ್ ತೋರಿಸುವ ನೆಪದಲ್ಲಿ ಆರೋಪಿ ಹಾಗೂ ಮತ್ತೊಬ್ಬ ಅಸಾಮಿ ಎಸೆಂಟ್ ಕಾರಿನಲ್ಲಿ ಬಲವಂತವಾಗಿ ಕೂರಿಸಿಕೊಂಡು ಕಾರಿನಲ್ಲಿ ಸ್ವಲ್ಪ ದೂರ ಹೋಗುತ್ತಿದ್ದಂತೆ ಪಿರ್ಯಾದುದಾರರಿಗೆ ಹಾಗೂ ಅವರ ಪಾಲುದಾರರಿಗೆ ಕಪ್ಪು ಬಟ್ಟೆಯನ್ನು ಕಣ್ಣಿಗೆ ಕಟ್ಟಿಸಿ ಅಲ್ಲಿಂದ ಗುಪ್ತ ಜಾಗಕ್ಕೆ ಕೆರದುಕೊಂಡು ಹೋಗಿ ಒಂದು ಮನೆಯಲ್ಲಿ ಕೂಡಿಹಾಕಿ ಕೈಗಳಿಂದ ಮತ್ತು ದೊಣ್ಣೆಗಳಿಂದ 3 ಜನರಿಗೂ ತೀವ್ರಕರವಾಗಿ ಹಲ್ಲೆ ಮಾಡಿ ರಕ್ತಗಾಯ ಪಡಿಸಿರುತ್ತಾರೆಂದು ಹಾಗೂ ದಿನಾಂಕ : 2.3.2005 ರಂದು ಮಧ್ಯಾಹ್ನ 1 ಗಂಟೆಯವರೆಗೂ ಬಂಧನದಲ್ಲಿಟ್ಟು ನಂತರ ಯಾವುದೋ ಕಾರಿನಲ್ಲಿ ಕರೆತಂದು ಕಬ್ಬನ್‌ಪಾರ್ಕ್‌ನ ಅಕ್ವೇರಿಯಮ್ ಬಳಿ ಇಳಿಸಿ ಹೋಗಿರುತ್ತಾರೆಂದು ತಮ್ಮನ್ನು ಅಪಹರಿಸಿದ ಸುರೇಶ್ ಹಾಗೂ ಇತರೆ ಆಸಾಮಿಗಳ ಮೇಲೆ ಕಾನೂನು ರೀತಿಯ ಕ್ರಮ ಕೈಗೊಳ್ಳಬೇಕೆಂದು ಕೊಟ್ಟ ದೂರಿನ ಮೇರೆಗೆ ವಿಧಾನಸೌಧ ಪೊಲೀಸ್ ಠಾಣೆ ಮೊ.ಸಂ.19/05, ಕಲಂ:365, 323, 324, 326, 506 ರೆ/ವಿ 34 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ.

ಪ್ರಕರಣವನ್ನು ಮುಂದಿನ ತನಿಖೆಗಾಗಿ ಸಿಸಿಬಿಗೆ ವರ್ಗಾವಣೆ ಮಾಡಿದ್ದು ಸಿಸಿಬಿ ಅಧಿಕಾರಿಗಳು ಆರೋಪಿಗಳಾದ 1. ಅನಿಲ್‌ಕುಮಾರ್. 2. ಲಕ್ಷ್ಮಣ್ 3. ಹರೀಶ್ ತೋಲಾರ್ ಎಂಬುವರುಗಳನ್ನು ಪತ್ತೆ ಹಚ್ಚಿ ಬಂಧಿಸಿ ಕಾನೂನು ರೀತ್ಯಾ ಕ್ರಮ ಜರುಗಿಸಿರುತ್ತಾರೆ.

ಇ) ಈ ಪ್ರಕರಣದ ತನಿಖೆ ಸಿಸಿಬಿಯ ಸಂಘಟಿತ ಅಪರಾಧ ದಳವು ಮಾಡುತ್ತಿದ್ದು ತಲೆಮರೆಸಿಕೊಂಡಿದ್ದ ಆರೋಪಿಗಳ ಪೈಕಿ ಹರೀಶ್ ಎಂಬುವವನನ್ನು ದಿನಾಂಕ : 14.06.2005 ರಂದು ದಸ್ತಗಿರಿ ಮಾಡಿ ಆತನ ವಶದಿಂದ ಕೃತ್ಯಕ್ಕೆ ಬಳಸಲಾದ ಒಂದು ಸ್ಕಾರ್ಪಿಯೋ ಮತ್ತು ಓಪೆಲ್ಲಾ ಕೋರ್ಸ್ ಕಾರುಗಳನ್ನು ಅಮಾನತ್ತು ಪಡಿಸಿಕೊಳ್ಳಲಾಗಿದೆ. ಇತರೆ ಆರೋಪಿತರನ್ನು ದಸ್ತಗಿರಿ ಮಾಡಲು ಕಾರ್ಯಪಡೆ ಕಾರ್ಯನಿರತವಾಗಿದೆ.

ಈ) ಇಂತಹ ಪ್ರಕರಣಗಳು ದಾಖಲಾದ ಕೂಡಲೇ ಅಪಹರಣಕಾರರ ಬಗ್ಗೆ ಸಾಕಷ್ಟು ಮಾಹಿತಿ ಸಂಗ್ರಹಿಸಿ ಪತ್ತೆ ಮಾಡಿ ಬಂಧಿಸಿ ಅವರುಗಳ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುತ್ತಿದೆ. ಪ್ರತಿ ಠಾಣೆಯಲ್ಲೂ ಅಪರಾಧಗಳನ್ನು ತಡೆಗಟ್ಟಲು ಹಾಗೂ ಪತ್ತೆ ಹಚ್ಚಲು ಪ್ರತ್ಯೇಕ ಅಪರಾಧ ವಿಭಾಗಾಧಿಕಾರಿ ಹಾಗೂ ಸಿಬ್ಬಂದಿಗಳನ್ನು ನೇಮಿಸಲಾಗಿದ್ದು,

ಅಂತೆಯೇ ವಿಭಾಗ ಹಾಗೂ ಉಪವಿಭಾಗದಲ್ಲಿಯೂ ಅಪರಾಧ ಪತ್ತೆ ದಳ (ಸ್ಕ್ವಾಡ್)ಗಳನ್ನು ನೇಮಿಸಲಾಗಿರುತ್ತದೆ. ಪೊಲೀಸ್ ಕಮೀಷನರ್, ಬೆಂಗಳೂರು ನಗರ ರವರು ಉಪ ಪೊಲೀಸ್ ಕಮೀಷನರ್, ಅಪರಾಧ ರವರ ನೇತೃತ್ವದಲ್ಲಿ ಸಿಸಿಬಿಯ ಅಧಿಕಾರಿಗಳನ್ನೊಳಗೊಂಡ ಸಂಘಟಿತ ಅಪರಾಧ ದಳವನ್ನು ನೇಮಿಸಿದ್ದು ಅದು ಹಾಲಿ ಕರ್ತವ್ಯ ನಿರ್ವಹಿಸುತ್ತಿದೆ.

4354 (5231) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) :- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಾತಿ ನಿಂದನೆಯ ಅಪಾದನೆಯ ಮೇರೆಗೆ 2003-04ನೇ ಇಸವಿಯಲ್ಲಿ ನಾಗರೀಕ ಹಕ್ಕು ಜಾರಿ ದಳದವರು ಹೂಡಿದ ಮೊಕದ್ದಮೆಗಳ ಸಂಖ್ಯೆ ಎಷ್ಟು, ಅವುಗಳಲ್ಲಿ ಎಷ್ಟು ಮೊಕದ್ದಮೆಗಳು ಸಾಬೀತಾಗಿವೆ;

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೂಡಲಾದ ಮೊಕದ್ದಮೆಗಳ ಸಂಖ್ಯೆ ಎಷ್ಟು, ಆರೋಪ ಸಾಬೀತು ಆಗದಿರುವ ಮೊಕದ್ದಮೆಗಳ ಸಂಖ್ಯೆ ಎಷ್ಟು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :

ಅ) ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯಕ್ಕೆ ಪ್ರತ್ಯೇಕವಾಗಿ ಪ್ರಕರಣಗಳನ್ನು ದಾಖಲಿಸಲು ಹಕ್ಕು ಇರುವುದಿಲ್ಲ. ಆದುದರಿಂದ ಈ ನಿರ್ದೇಶನಾಲಯವು ಯಾವುದೇ ಪ್ರಕರಣಗಳನ್ನು ದಾಖಲು ಮಾಡಿರುವುದಿಲ್ಲ.

ಆದರೂ ರಾಜ್ಯದಲ್ಲಿ ಜಾತಿ ನಿಂದನೆ ಬಗ್ಗೆ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಹಾಗೂ ಸಾಬೀತಾಗಿರುವ ಒಟ್ಟು ಪ್ರಕರಣಗಳ ವರ್ಷವಾರು ವಿವರ ಈ ಕೆಳಕಂಡಂತೆ ಇರುತ್ತದೆ.

	2003	**2004**
ದಾಖಲಾಗಿರುವ ಪ್ರಕರಣಗಳು	1165	1193
ಸಾಬೀತಾಗಿರುವ ಪ್ರಕರಣಗಳು	918	903

ಆ)

	2003	**2004**
ದಾಖಲಾಗಿರುವ ಪ್ರಕರಣಗಳು	27	25
ಸಾಬೀತಾಗಿರುವ ಪ್ರಕರಣಗಳು	07	12